ಹಾಗಿಲ್ಲ ನೀವು ಅರ್ಧ ಗಂಟೆ ಮಾತನಾಡಿದಿರಲ್ಲ... ನೀವು ಅರ್ಧ ಗಂಟೆ ಮಾತನಾಡಿದರೆ ಇಲ್ಲಿ ಉತ್ತರ ಸಿಗುತ್ತದೆಯೇ? ಯಾವುದಾದರೊಂದು ಪ್ರಶ್ನೆ ಕೇಳಿ. ಆ ಪ್ರಶ್ನೆಗೆ ಆದರೆ ನೀವು ಉತ್ತರ ಕೊಡಿ. ಇಲ್ಲವೆಂದರೆ, ಸುಮ್ಮನೆ ಕುಳಿತುಕೊಳ್ಳಿ. ನೀವೂ ಕೂಡ ಒಂದು ಗಂಟೆ ಮಾತನಾಡುತ್ತೀರಲ್ಲ.

ಶ್ರೀ ನೆ.ಲ. ನರೇಂದ್ರ ಬಾಬು:– ನಾಳೆ ದಿವಸ ಬಿದ್ದರೆ ಸರ್ಕಾರದ ಹೊಣೆ ಬರುತ್ತದೆ. ಸರ್ಕಾರದಿಂದ ಒಂದು ಭರವಸೆ ಕೊಡಿಸಿ, ಪರ್ಯಾಯ ವ್ಯವಸ್ಥೆ ಮಾಡಿಸಿ.

ವಿಷಯ: ಬೆಂಗಳೂರು ಸುತ್ತಮುತ್ತಲಿನ ಹದಗೆಟ್ಟ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಸಂಬಂಧ ಅಭಿವೃದ್ಧಿ ಶುಲ್ಕವನ್ನು ಸ್ಥಳೀಯ ಸಂಸ್ಥೆಗಳು ಸಂಗ್ರಹಿಸುವ ಕುರಿತು.

ಶ್ರೀ ಆರ್. ಅಶೋಕ್ (ಉತ್ತರಹಳ್ಳಿ): ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರಿನ ಸುತ್ತಮುತ್ತಲೂ ಬರುವ ಗ್ರಾಮೀಣ ಪ್ರದೇಶದ ಹದಗೆಟ್ಟ ರಸ್ತೆಗಳ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಇಷ್ಟಪಡುತ್ತಿದ್ದೇನೆ. ಈ ಕುರಿತಂತೆ ಸರ್ಕಾರ ಈಗಾಗಲೆ ನನಗೆ ಉತ್ತರ ಕೊಟ್ಟಿದೆ. ಬೆಂಗಳೂರಿನ ಸುತ್ತಮುತ್ತಲಿರುವ ಹಳ್ಳಿಗಳು heavy trafficನಿಂದಾಗಿ ತೊಂದರೆ ಅನುಭವಿಸುತ್ತಿವೆ. ಈ ಹಳ್ಳಿಗಳೂ ಬೇರೆ ಹಳ್ಳಿಗಳ ತರಹವಲ್ಲ. ಈ ಹಳ್ಳಿಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕೈಗಾರಿಕೆಗಳು ಬರುವುದಕ್ಕೆ ಸರ್ಕಾರ ಅನುಮತಿ ನೀಡಿದೆ. ಈ ಗ್ರಾಮೀಣ ಪ್ರದೇಶಗಳಲ್ಲಿ ಸುಮಾರು 748 ಕಿಲೋಮೀಟರ್ ಗಳಷ್ಟು ರಸ್ತೆ ಬರುತ್ತಿದೆ. ಆದರೆ, ಪ್ರತಿ ಕ್ಷೇತ್ರಕ್ಕೂ ರಸ್ತೆ ಅಭಿವೃದ್ಧಿಗೆಂದು ಸರ್ಕಾರ ಕೊಟ್ಟಿರುವುದು ಕೇವಲ ಇಪ್ಪತ್ತು ಲಕ್ಷ ಮಾತ್ರ. ಇಲ್ಲಿನ ಕೈಗಾರಿಕೆಗಳಿಂದ ಸರ್ಕಾರಕ್ಕೆ ಬಹಳಷ್ಟು ಟ್ಯಾಕ್ಸ್ ಬರುತ್ತದೆ. ಆದರೆ, ಈ ಪ್ರದೇಶಗಳಲ್ಲಿರುವ ಯಾವುದೇ ರಸ್ತೆಗಳನ್ನು ಸರ್ಕಾರ ಇದುವರೆಗೂ ಅಭಿವೃದ್ಧಿಪಡಿಸಿಲ್ಲ. ಕಳೆದೆರಡು ವರ್ಷಗಳಿಂದ ಜಿಲ್ಲಾ ಪರಿಷತ್ ಸುಮಾರು ಎಂಟು ಕೋಟಿ ರೂಪಾಯಿಗಳ ನಷ್ಟದಲ್ಲಿದೆ. ಆದರೂ ಜಿಲ್ಲಾ ಪರಿಷತ್ ವತಿಯಿಂದ ರಸ್ತೆಗಳನ್ನು ಅಭಿವೃದ್ಧಿಪಡಿಸುವುದಾಗಿ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಸುಮಾರು ಎಂಟು ಕೋಟಿ ರೂಪಾಯಿಗಳಷ್ಟು ನಷ್ಟದಲ್ಲಿರುವ ವ್ಯವಸ್ಥೆಯನ್ನು ನೀವು ಹೇಗೆ ಸರಿಪಡಿಸುತ್ತೀರಿ? ಈ ಪ್ರದೇಶ ಬಿ.ಡಿ.ಎ. ವ್ಯಾಪ್ತಿಗೆ ಬರಲಿದ್ದು, ಸುಮಾರು 200–300 ಫ್ಲಾಟುಗಳನ್ನು ಕಟ್ಟುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದೀರಿ. ಅಭಿವೃದ್ಧಿ ಶುಲ್ಕವೆಂದು ಸುಮಾರು 2 ರಿಂದ 3 ಕೋಟಿ ರೂಪಾಯಿಗಳಷ್ಟು ಹಣವನ್ನು ಬಿ.ಡಿ.ಎ. ತೆಗೆದುಕೊಳ್ಳುತ್ತಿದೆ. ಆದರೆ,

ಬಿ.ಡಿ.ಎ.ನವರು ಹಳ್ಳಿಗಳಿಗೆ ಬಂದು ಯಾವುದೇ ರೀತಿಯ ಅಭಿವೃದ್ಧಿ ಕಾರ್ಯ ಹಮ್ಮಿಕೊಳ್ಳುವುದಿಲ್ಲ. ಆದುದರಿಂದ, ಸರ್ಕಾರಕ್ಕೆ ನಾನು ಆಗ್ರಹಪಡಿಸುತ್ತಿರುವುದೇನೆಂದರೆ, ಕನಿಷ್ಠ ಪಕ್ಷ ಅ ಅಭಿವೃದ್ಧಿ ಶುಲ್ಕವನ್ನು ಸ್ಥಳೀಯ ಸಂಸ್ಥೆಗಳಿಗಾದರೂ ಕೊಡಿ. ಬಿ.ಡಿ.ಎ.ನವರು ಅನುಮತಿ ಕೊಡಲಿ. ಯಾವ ಸಂಸ್ಥೆಯವರು ಅಭಿವೃದ್ಧಿ ಕಾರ್ಯ ಹಮ್ಮಿಕೊಳ್ಳುತ್ತಾರೋ ಆ ಸಂಸ್ಥೆಗೇ ಅಭಿವೃದ್ಧಿ ಶುಲ್ಕ ಹೋಗಬೇಕು. ಇದು main fault ಆಗಿರುವುದರಿಂದ ಅಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳಾಗುತ್ತಿಲ್ಲ. ಇವೊತ್ತು ಬನ್ನೇರುಘಟ್ಟ ರಸ್ತೆಯಲ್ಲಿ ಯಥೇಚ್ಛವಾಗಿ ಪ್ಲಾಟುಗಳನ್ನು ನಿರ್ಮಿಸುವುದಕ್ಕೆ ಸರ್ಕಾರ ಅನುಮತಿ ನೀಡಿದೆ. ಸಾಯಂಕಾಲವಾದರೆ ಬನ್ನೇರುಘಟ್ಟ ರಸ್ತೆಯಿಂದ ಪಾಸ್ ಅಗಬೇಕಾದರೆ2–3 ಗಂಟೆಗಳು ಬೇಕಾಗುತ್ತದೆ. ಸಂಗ್ರಹವಾಗುತ್ತಿರುವ ದುಡ್ಡು ಹೋಗುತ್ತಿರುವುದು ಮಾತ್ರ ಬಿ.ಡಿ.ಎ.! ಆದರೆ, ಅಭಿವೃದ್ಧಿ ಕೆಲಸ–ಕಾರ್ಯಗಳನ್ನು ಪಿಡಬ್ಲೂಡಿ ಮತ್ತು ಜಿಲ್ಲಾ ಪರಿಷತ್ ನವರು ಮಾಡಬೇಕಾಗಿದೆ. ಆದರೆ, ಅವರೇಕೆ ಮಾಡುತ್ತಾರೆ? ಅವರನ್ನು ಈ ಬಗ್ಗೆ ಕೇಳಿದರೆ, 'ನಮಗೆ ಯಾರೂ ಹಣಕೊಟ್ಟಿಲ್ಲ. ನಾವು ಮಾಡುವುದಿಲ್ಲ' ಎನ್ನುತ್ತಾರೆ. ಅದಕ್ಕೋಸ್ಕರ, ನಾನು ಸರ್ಕಾರವನ್ನು ಆಗ್ರಹಪಡಿಸುತ್ತಿರುವುದೇನೆಂದರೆ, ಬೆಂಗಳೂರಿನ ಸುತ್ತಮುತ್ತಲಿರುವ ಹಳ್ಳಿಗಳ ರಸ್ತೆಗಳೇನಿವೆ., ಆ ರಸ್ತೆಗಳ ಮೇಲೆ 20–30 ಟನ್‌ಗಳಷ್ಟು ಭಾರ ಹೊತ್ತ ಲಾರಿಗಳು ಕ್ರಮಿಸುತ್ತವೆ. ಇದರಿಂದ ರಸ್ತೆಗಳು ತೀರಾ ಹದಗೆಟ್ಟಿವೆ. ಆದಕಾರಣ, ಈ ಪ್ರದೇಶದಲ್ಲಿ ಹಮ್ಮಿಕೊಳ್ಳುವ ಅಭಿವೃದ್ಧಿ ಕೆಲಸ–ಕಾರ್ಯಗಳಿಂದ, ಪ್ಲಾಟುಗಳ ನಿರ್ಮಾಣವಿರಬಹುದು, ಕೈಗಾರಿಕೆಗಳ ನಿರ್ಮಾಣವಿರಬಹುದು, ಇದರಿಂದ ಬರುವ ಹಣವನ್ನು ಜಿಲ್ಲಾ ಪರಿಷತ್‌ಗೆ ಬರುವ ರೀತಿ ವ್ಯವಸ್ಥೆ ಮಾಡಿದರೆ ಅಲ್ಲಿನ ರಸ್ತೆಗಳು ಸುಧಾರಣೆಯಾಗುತ್ತದೆಂದು ತಮ್ಮಲ್ಲಿ ಮನವಿ ಮಡಿಕೊಳ್ಳುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಅಶೋಕ್ ರವರಿಗೆ ಈ ಪ್ರಶ್ನೆಗೆ ಈಗಾಗಲೆ ಉತ್ತರ ಸಿಕ್ಕಿರುವಂತೆ ಕಾಣುತ್ತದೆ. ಈ ಬಗ್ಗೆ ತಾವೇನು ಸಲಹೆಗಳನ್ನು ನೀಡಿದ್ದೀರಿ, ಇದನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತರುತ್ತೇನೆ ಮತ್ತು ನಿಮ್ಮನ್ನು ಕರೆದು ಚರ್ಚಿಸುವಂತೆ ಸೂಚನೆ ಕೊಡುತ್ತೇನೆ.

ಶ್ರೀ ಆರ್. ಅಶೋಕ್: ಸದನದಲ್ಲಿ ಕಂದಾಯ ಸಚಿವರಾದ ಶ್ರೀ ಎಂ.ಪಿ. ಪ್ರಕಾಶ್ ರವರು ಇರುವುದರಿಂದ ಈ ವಿಷಯ ಅವರಿಗೆ ಸಂಬಂಧಪಡುತ್ತದೆ. ಅವರು ಇದರ ಬಗ್ಗೆ ಸ್ವಲ್ಪ ಗಮನಹರಿಸಬೇಕು. ಬೆಂಗಳೂರು ಸುತ್ತಮುತ್ತಲೂ ಬರುವ ಗ್ರಾಮೀಣ ಭಾಗಗಳಲ್ಲಿ ಪ್ಲಾಟುಗಳನ್ನು ನಿರ್ಮಿಸಲು ಬಿ.ಡಿ.ಎ.ನವರು

ಅನುಮತಿ ನೀಡುತ್ತಾರೆ. ಒಂದೊಂದು ಹಳ್ಳಿಯಲ್ಲಿ ಸುಮಾರು ಎರಡು ಸಾವಿರದಷ್ಟು ಮನೆಗಳನ್ನು ಕಟ್ಟಿದ್ದಾರೆ. ಆದರೆ, ಅದರಿಂದ ಬರುವ 2–3 ಕೋಟಿ ರೂಪಾಯಿಗಳಷ್ಟು ಅಭಿವೃದ್ಧಿ ಶುಲ್ಕವನ್ನು ಬಿ.ಡಿ.ಎ.ಗೆ ಕಟ್ಟುತ್ತಾರೆ. ಆದರೆ, ಬಿ.ಡಿ.ಎ. ನಬರು ಯಾವುದೇ ಅಭಿವೃದ್ಧಿ ಕೆಲಸ – ಕಾರ್ಯ ಹಮ್ಮಿಕೊಳ್ಳುವುದಿಲ್ಲ. ಬಿ.ಡಿ.ಎ.ನವರು ಅನುಮತಿ ಕೊಡುವುದು ಬಿಟ್ಟರೆ ಅಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಹಮ್ಮಿಕೊಳ್ಳುವುದಿಲ್ಲ. ಅತ್ತ ತಿರುಗಿಯೂ ನೋಡುವುದಿಲ್ಲ. ಎರಡು ಸಾವಿರದಷ್ಟು ಜನಸಂಖ್ಯೆ ಬರುವ ಅಲ್ಲಿನ ರಸ್ತೆಗಳ ಸ್ಥಿತಿ–ಗತಿ ಬಗ್ಗೆ ತಮಗೆ ತಿಳಿದಿದೆ. ಆ ರಸ್ತೆಗಳಲ್ಲಿ ಲಾರಿಗಳೂ ಮೆಟೀರಿಯಲ್ಸ್ ಹೊತ್ತುಕೊಂಡು ಸಾಗುವುದರಿಂದ ರಸ್ತೆಗಳೆಲ್ಲಾ ಹಾಳಾಗಿ ಹೋಗುತ್ತದೆ. ಆ ಹಾಳಾದ ರಸ್ತೆಗಳ ಬಗ್ಗೆ ಪಂಚಾಯಿತಿಯವರು ಏನೂ ಮಾಡುವ ಅವಶ್ಯಕತೆ ಇರುವುದಿಲ್ಲ. ಏಕೆಂದರೆ, ರಸ್ತೆಗಳ ಅಭಿವೃದ್ಧಿಗೆ ಕೋಟ್ಯಂತರ ರೂಪಾಯಿಗಳಷ್ಟು ಹಣ ಬೇಕಾಗುತ್ತದೆ. ಇದರಲ್ಲಿ ಕಾನೂನು ತೊಡಕು ಇದೆ. ಬಿ.ಡಿ.ಎ.ನವರು ಏನು ಹಣವನ್ನು ಕಲೆಕ್ಟ್ ಮಾಡುತ್ತಿದ್ದಾರೆ, ಅವರು ಪ್ಲಾನ್ ಸ್ಯಾಂಕ್ಷನ್ ಮಾಡಲಿ. ಆದರೆ, ಅಭಿವೃದ್ಧಿ ಶುಲ್ಕವನ್ನು ಸ್ಥಳೀಯ ಸಂಸ್ಥೆಗಳಿಗೇ ಸಿಗುವ ರೀತಿ ತಾವು ವ್ಯವಸ್ಥೆ ಮಾಡಬೇಕು.

ಶ್ರೀ ಎಂ.ಪಿ ಪ್ರಕಾಶ್(ಕಂದಾಯ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಈ ವಿಷಯ ತಮಗೂ ಕೂಡ ಗೊತ್ತಿದೆ ಹಾಗೆಯೇ ಮಾನ್ಯ ಹಿರಿಯ ಸದಸ್ಯರಾದ ಅಶೋಕ್ ರವರಿಗೂ ಗೊತ್ತಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಸ್ತಿತ್ವಕ್ಕೆ ಬಂದ ನಂತರ ಅಲ್ಲಿ ಮತ್ತೊಂದು ಕಾನೂನಿನ ವ್ಯಾಪ್ತಿ ಇರಲು ಸಾಧ್ಯವಿಲ್ಲ. ಹೇಗೆ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಹಸ್ತಕ್ಷೇಪವೆಸಗುವುದಿಲ್ಲವೋ, ಅದೊಂದು ಪ್ರತ್ಯೇಕವಾದ ಸಂಸ್ಥೆಯಾಗಿದೆ. ಮಾನ್ಯ ಸದಸ್ಯರು ತಿಳಿಸಿರುವಂತೆ, ಅಲ್ಲಿ ಗ್ರಾಮ ಪಂಚಾಯಿತಿಯೆಂದು ಅಸ್ತಿತ್ವದಲ್ಲಿರುವ ಸ್ಥಳೀಯ ಸಂಸ್ಥೆ ಇರುವಾಗ ಪ್ರಾಧಿಕಾರದವರು ಶುಲ್ಕ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಬಿ.ಎಂ.ಆರ್.ಡಿ.ಎ. ಕೆಳಗೆ ಪ್ರಾಧಿಕಾರದವರು ಮಾಮೂಲಾಗಿ ಒಪ್ಪಿಗೆ ಪಡೆಯುವುದಕ್ಕೆ ಪ್ರಯತ್ನಿಸಬಹುದೇ ವಿನಾ ಶುಲ್ಕ ಸಂಗ್ರಹಿಸಿದರೆ ಗ್ರಾಮ ಪಂಚಾಯತಿಗಳಿಗೆ ತೊಂದರೆಯಾಗುತ್ತದೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ಕುರಿತು ಗ್ರಾಮೀಣಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪನವರೊಂದಿಗೆ ಮಾತನಾಡಿ ತಮಗೆ ಉತ್ತರ ತರಿಸಿಕೊಡುತ್ತೇನೆ.(ಮಾನ್ಯ ಸದಸ್ಯರಾದ ಕಟ್ಟಾ ಸುಬ್ರಹ್ಮಣ್ಯನಾಯ್ಡುರವರು ಮಾತನಾಡಲು ಎದ್ದು ನಿಂತರು)

ಉಪಾಧ್ಯಕ್ಷರು: No supplimentaries.ಮಾನ್ಯ ಎಸ್.ಎಸ್.ಪಾಟೀಲರೆ, ನೀವು ಮತನಾಡಿ. ನಿಮಗೆ (ಕಟ್ಟಾ ಸುಬ್ರಹ್ಮಣ್ಯನಾಯ್ಡು) ಮಾತನಾಡಲು ಅವಕಾಶವಿಲ್ಲ. ಬೆಂಗಳೂರಿಗೆ ಸಂಬಂಧಿಸಿದಂತೆ ಸದಸ್ಯರು ಕೇಳಿದ್ದಕ್ಕೆ ಮಾನ್ಯ ಸಚಿವರು ಸರಿಯಾಗಿ ಉತ್ತರ ಕೊಟ್ಟಿದ್ದಾರೆ. ಇದು ಕ್ವೆಶನ್ ಅವರ್ ಅಲ್ಲ ಪಾಟೀಲರೆ, ಈಗ ನೀವು ಮಾತನಾಡಿ.

(ಸದಸ್ಯರಾದ ಕಟ್ಟಾ ಸುಬ್ರಹ್ಮಣ್ಯನಾಯ್ಡುನವರು ಮಾತನಾಡುತ್ತಿದ್ದುದು ಸ್ಪಷ್ಟವಾಗಿ ಕೇಳಿಸಲಿಲ್ಲ)

ಶ್ರೀ ಎಸ್.ಎಸ್. ಪಾಟೀಲ್: ಅವರು ಹಾಗೆ ಮಾತನಾಡಿದರೆ ನಾನು ಹೇಗೆ ಮಾತನಾಡುವುದು?

ಉಪಾಧ್ಯಕ್ಷರು: ನಾಯ್ಡುರವರೆ, please ಕುಳಿತುಕೊಳ್ಳಿ. It is no a matter of right. ಇದು You don't have any right. ಇದು zero hour. It is a convention ಅಷ್ಟೇ. ನೀವು ಆ ರೀತಿ right ತೆಗೆದುಕೊಂಡು ಮಾತನಾಡುವುದು ಸರಿಯಲ್ಲ. ಅದರ ಬಗ್ಗೆ ಬೇರೆ ಅವಕಾಶ ಕೇಳಿಕೊಳ್ಳಿ. ಪಾಟೀಲರೆ, ಈಗ ನೀವು ಮಾತನಾಡಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು: ಬೆಂಗಳೂರನ್ನು ಅಭಿವೃದ್ಧಿ ಮಾಡಬೇಡಿ, ನೀರು ಕೊಡಬೇಡಿ, ರಸ್ತೆ ಕೊಡಬೇಡಿ, ಕರೆಂಟ್ ಕೊಡಬೇಡಿ, ಶಾಲೆ ಕೊಡಬೇಡಿ, ಏನೂ ಕೊಡಬೇಡಿ. ಆದರೆ, ಈ ಬಗ್ಗೆ ಪ್ರಶ್ನೆ ಕೇಳಿದರೆ ಅದನ್ನೂ ಕೇಳಬೇಡಿ ಎಂದು ಹೇಳುತ್ತಿರುವುದು ಮಾತ್ರ ಆಶ್ಚರ್ಯಕರವಾಗಿದೆ. ಬೆಂಗಳೂರಿನಲ್ಲಿರುವವರು ಶೇಕಡ 60ರಷ್ಟು ಟ್ಯಾಕ್ಸ್ ಕಟ್ಟುತ್ತಾರೆ. ಒಂದು ಸಣ್ಣ ಪ್ರಶ್ನೆ ಕೇಳುವುದಕ್ಕೂ ನೀವು ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

ಉಪಾಧ್ಯಕ್ಷರು: ಇಷ್ಟು ಅನುಭವವಿರುವ ಸದಸ್ಯರು ಅರ್ಥಮಾಡಿಕೊಳ್ಳಬೇಕು. ನಿಮಗೆ ಅವಕಾಶ ಕೊಡುವುದಕ್ಕೆ ಇದು ಪ್ರಶ್ನೋತ್ತರ ವೇಳೆಯೇ? ಶೂನ್ಯ ವೇಳೆಯಲ್ಲಿ ಮಾತನಾಡಲು ಯಾರು ಹೆಸರು ಕೊಟ್ಟಿದ್ದಾರೋ, ಅವರು ಮಾತ್ರ ಮಾತನಾಡಬೇಕು. ಅದು ಬಿಟ್ಟು ಒಬ್ಬೊಬ್ಬರು ಅರ್ಧ ಗಂಟೆ ಮಾತನಾಡಿದರೆ ಹೇಗೆ? ಒಂದು ನಿಮಿಷಕ್ಕಿಂತ ಹೆಚ್ಚು ಅವಕಾಶ ಕೊಡುವಂತಿಲ್ಲ. It is a convention ಅಷ್ಟೇ You don't have any right to comment on the issues. ಪಾಟೀಲರೆ, ಈಗ ತಾವು ಮಾತನಾಡಿ.